
# ನನ್ನ ಒಂದು ಗೆರೆಯ ಪವಾಡ

KANNADA




ಏಕಲವ್ಯ ಪ್ರಕಾಶನ

# ನನ್ನ ಒಂದು ಗೆರೆಯ

# ಪವಾಡ

ಕತೆ ಮತ್ತು ಚಿತ್ರಗಳುಃ
ಲಿಓನಾರ್ಡ ಕೆಸ್ಲರ



ಏಕಲವ್ಯ ಪ್ರಕಾಶನ

# ನನ್ನ ಒಂದು ಗೆರೆಯ ಪವಾಡ

**Nanna vandu gerey pavaad**

Story and pictures by Leonard Kessler
Kannada Translation: Prabhakar Nanawaty

This Kannada translation is supported by the Parag Initiative of Tata Trusts.

May 2018 / 1000 copies
March 2024 / 2000 copies
Paper: 70 gsm Maplitho and 220 gsm Paper board (cover)
ISBN: 978-93-85236-56-3
Price: ₹ 100.00

Published by:
EKLAVYA FOUNDATION
Jamnalal Bajaj Parisar
Near Fortune Kasturi, Jatkhedi,
Bhopal - 462 026 (MP)
Phone: +91 755 - 297 7770, 71, 72
www.eklavya.in / books@eklavya.in

Printed at: R. K. Secuprint P. Ltd. , Bhopal, Phone +91 755 2687 589



ನೋಡಿ,

ಇದು ಒಂದು ಪೆನ್ಸಿಲು!



ಎಷ್ಟು ಚೆನ್ನಾಗಿ ಬರೆಯುತ್ತದೆ.

ನಾನೀಗ ಏನು ಬರೆಯಲಿ?




ನಾನು


ಕೂಡ


ಗೆರೆಯನ್ನು

ಬರೆಯಬಹುದು




ನಾನು ಗೆರೆಯನ್ನು
ಸುತ್ತುತ್ತ ಸುತ್ತುತ್ತ –
ಸುತ್ತು ತಿರುಗಿ ವರ್ತುಳ
ಮಾಡುವೆ.
ನೋಡಿ!






ನಾನು ಗೆರೆಯನ್ನು ಸುತ್ತ
ಸುತ್ತ ತಿರುಗಿಸಿ



ಸೂರ್ಯನಂತೆ,




ಇಲ್ಲವೆ ಗಾಲಿಯಂತೆ,






ಇಲ್ಲವೆ ವೇಗದಿಂದ ಓಡುವ ಟ್ರೇನು




ಇಲ್ಲವೆ ಕಾರು ಗಾಡಿ ಮಾಡಬಹುದು.



ಗೆರೆಯನ್ನು

ಇಲ್ಲಿ



ಮತ್ತು ಅಲ್ಲಿ,


ಮತ್ತು ಅಲ್ಲಿ ಕೂಡ

ಹೋಗುವಂತೆ ಮಾಡಬಹುದು.

ನೋಡಿ,

ಇದು ಒಂದು ಸರಿ ಚಚ್ಚೌಕ!







ನಾನು ಗೆರೆಯನ್ನು ಮೇಲೆ ಹೋಗುವ ಹಾಗೆ




ಹಾಗು ಆ ಮೇಲೆ ಕೆಳಗೆ
ಬರುವ ಹಾಗೆ



ಒಂದು ನಗರದ ಹಾಗೆ



ಇಲ್ಲವೆ ಚಿಕ್ಕ ಪಟ್ಟಣದ ಹಾಗೆ ಮಾಡಬಹುದು.



ಮೇಲೆ

ಮೇಲೆ

ಮೇಲೆ


ಪಾವಟಿಗೆ ಹಾಗೆ

ಕೆಳಗೆ

ಕೆಳಗೆ

ಕೆಳಗೆ

ಪಾವಟಿಗೆ ಹಾಗೆ


ಮೇಲೆ
ಮೇಲೆ
ಕೆಳಗೆ
ಕೆಳಗೆ

ಮೇಲೆ ಮತ್ತು ಕೆಳಗೆ

ಮುಗುಳ್ನಗೆಯಂತೆ




ಮೇಲೆ ಮತ್ತು ಕೆಳಗೆ

ರೊಚ್ಚಿಗೆದ್ದಂತೆ



ಮೇಲೆ ಮತ್ತು ಕೆಳಗೆ

ಸುತ್ತುತ್ತ ಹೋದಂತೆ




ಸುತ್ತುತ್ತ ಮತ್ತು ಸುತ್ತುತ್ತ

ವರ್ತುಳ ಮತ್ತು ಚಚ್ಚೌಕ ಅಲ್ಲಿ ಮತ್ತು

ಇಲ್ಲಿ





ನಾನು ಗೆರೆಯನ್ನು ಎಲ್ಲಿ ಬೇಕು
ಅಲ್ಲಿಗೆ ಒಯ್ಯಬಹುದು.





ಗೆರೆಯನ್ನು

ತುಂಡು

ತುಂಡು


ಮಾಡಿ

ಸಮುದ್ರದ ಅಲೆ ಮಾಡಬಹುದು



ನಾನು ಗೆರೆಯನ್ನು ತುಂಡರಿಸಿ ಚಿಕ್ಕ ಚುಕ್ಕೆ ಮಾಡಬಹುದು.





ಸಾಕಷ್ಟು ಸಾಕಷ್ಟು ಚುಕ್ಕೆಗಳು-

ಗೋಲಿಯಂತೆ

ಇಲ್ಲವೆ

ದಡಾರದಂತೆ

ಇಲ್ಲವೆ ಜೇನ್ನೊಣದ ಮೈ ಮೇಲಿನ ಚುಕ್ಕೆಗಳಂತೆ



ಗುಂಯ, ಚಿಕ್ಕ ಜೇನ್ನೊಣವೇ,
ನನ್ನನ್ನು ಕಚ್ಚಬೇಡ...



ನಾನು ಚಿಕ್ಕ
ಚಿಕ್ಕಚುಕ್ಕೆಗಳಿರುವ ಗೆರೆ
ಕೂಡ ಹೊಡೆಯಬಹುದು.






ಕಣ್ಣಿನಂತೆ, ನೊಣದಂತೆ,

ಮರದ ಕೊರಡಿನ ಮೇಲೆ


ಕುಳಿತ  ಕಪ್ಪೆಯ


ಕಣ್ಣುಗಳಂತೆ,



ನನ್ನ ಗೆರೆ ಮುಂದೆ
ಹೋಗುತ್ತದೆ ಇಲ್ಲವೆ
ನಿಂತುಬಿಡುತ್ತದೆ
ಹೋಗು...

ನಿಲ್ಲು..... .





ನಿಲ್ಲು ...

ಹೋಗು...

ನನಗೆ ಏನು

ಮಾಡಬೇಕು ?

ತಿಳಿಯಲೊಲ್ಲದು.

ನಾನು ಗೆರೆಯಿಂದ

ದಾರಿಯ ಮೇಲೆ

ಕವಾಯತ್ತು

ಮಾಡಿಸಬಹುದು.

ಲೆಫ್ಟ,


ರಾಯಿಟ,

ಲೆಫ್ಟ,

ರಾಯಿಟ



ಇಲ್ಲವೆ ಈ ರೀತಿ..




ಸಿಪಾಯಿಗಳಂತೆ ನಡೆಯುವದು




ಇಲ್ಲವೆ ಎದುರಿಗೆ ನೋಡುತ್ತ ಹೋಗುವದು ...





ನಾನು ತೂಗಾಡುವ ಗೆರೆ
ಬರೆಯಬಹುದು.
ಜೋಕಾಲೆ,
ಜೋಕಾಲೆ,
ಜೋಕಾಲೆ



ಇಲ್ಲವೆ ತೂಗು ಖುರ್ಚಿಯಂತೆ

ಇಲ್ಲವೆ ಸಮುದ್ರದ ಮೇಲಿನ
ಹಡಗಿನಂತೆ



ಇಲ್ಲವೆ ಕಪ್ಪೆ ಜಿಗಿತದಂತೆ

ಹಾಪ್,

ಹಾಪ್,

ಹಾಪ್





ಆ ಮೇಲೆ

ಮುಂದೆ ......

ಪಾಪ್




ಪೆಟ್ಟಿಗೆಯಲ್ಲಿ ಜ್ಯಾಕ್

ಈಗ ನನ್ನ ಗೆರೆ


ಹಾವಿನಂತೆ

ವಂಕು

ವಂಕಾಗಿ...

ಈಗ ನನ್ನ ಗೆರೆ

ಹಾವಿನಂತೆ



ಇಲ್ಲವೆ ದೊಡ್ಡ, ದಪ್ಪ


ತಗಣಿತಾಯಿಯಂತೆ ಹಾಸಿಗೆಯ ಮೇಲೆ

ಸರಿದಾಡುತ್ತ

ಮೆಲ್ಲ ಮೆಲ್ಲಗೆ,


ಮೆಲ್ಲ ಮೆಲ್ಲಗೆ,

ಮೆಲ್ಲ ಮೆಲ್ಲಗೆ..




ಚಿಮ್ಮಿ ಹೋದಂತೆ...
ನನ್ನ ಗೆರೆಯನ್ನು ವೇಗದಿಂದ
ಆಕಾಶದೆಡೆ ಹಾರಿಸುತ್ತೇನೆ.
ವಿಮಾನದಂತೆ
ಇಲ್ಲವೆ ಚಂದ್ರನ ಮೇಲೆ ಬಿಟ್ಟ
ಕ್ಷೇಪಣಾಸ್ತ್ರದಂತೆ...


ಚಿಮ್ಮಿದಂತೆ





ವೇಗದಿಂದ, ಮೆಲ್ಲ
ಮೆಲ್ಲಗೆ,
ಒಳಗೆ,
ಹೊರಗೆ, ಸುತ್ತ
ಸುತ್ತ,
ಮತ್ತು
ಸುತ್ತುತ್ತಲೇ,
ಇದ್ದ
ಹಾಗೆ...







ಪಾಪ! ಬೆಕ್ಕಿನ ಮರಿಗೆ ಹೊರಬೀಳಲು ಬರುವದಿಲ್ಲ!




ನನಗೆ ಅನ್ನಿಸಿದಂತೆ
ನನ್ನ ಗೆರೆ
ಹೋಗುತ್ತಲೇ,
ಹೋಗುತ್ತಲೇ,
ಹೋಗುತ್ತಲೇ,
ಹೋಗು....




BOOM



ನಾನು ಏನೇನನ್ನು ಮಾಡಬಹುದು
ಎಂಬುದನ್ನು ಎಲ್ಲ ಕಡೆಗೂ ನೋಡಿ.




ನಾನು ಅದನ್ನು ತಿಳುವು ಮಾಡ-
ಬಹುದು. ದಪ್ಪ ಮಾಡಬಹುದು

ನಾನು ಇದನ್ನು ಹೀಗೆ ಕೂಡ
ಮಾಡಬಹುದು

ನಾನು ಹೀಗೆ ಕೂಡ

ಮಾಡಬಹುದು.




ನಾನು ವಿದೂಷಕನಂತಹ

ಬೆಕ್ಕನ್ನು ಮಾಡಬಹುದು,

ನಾನು ಇಂದು ಮಳೆ ಬರುವ ಹಾಗೆ ಮಾಡಬಹುದು.





ಆ ಮೇಲೆ ಎಲ್ಲ ಮಳೆಯನ್ನು
ಮಾಯವಾಗಿಸಬಹುದು. ಹಾಗೆ
ಮಾಡಿದಾಗ ನಾನು ಆಟವಾಡಲು
ಹೋಗಬಹುದು.

ನಾನು ಮನೆಯಲ್ಲಿ ಓಡಾಡುವ
ಇಲಿಗಳನ್ನು ಮಾಡಬಹುದು.



ಏ ಇಲಿ ಮರಿಯೇ, ಇಲ್ಲಿ ನೋಡು

ಬೆಕ್ಕು ಬರುತ್ತಲಿದೆ!





ನಾನು ಹೂಗಳನ್ನು ಮಾಡಬಹುದು.


ನಾನು ಗಿಡಗಳನ್ನು ಮಾಡಬಹುದು


ನಾನು ಹಿಮದ ಸುರಿಮಳೆ ಬೀಳಿಸಬಹುದು.

ನಾನು ವಸ್ತುಗಳನ್ನು ಹೆಪ್ಪುಗಟ್ಟಿಸಬಹುದು.



ನಾನು 1,2,3 ಮಾಡಬಹುದು ಮತ್ತು A, B, C, ಕೂಡ.






ನಾನು ಈ ಎಲ್ಲ ವಸ್ತುಗಳನ್ನು  ಕೇವಲ ಒಂದು
ಗೆರೆಯಿಂದ ಮಾಡಬಹುದು. ಒಂದೇ ಗೆರೆ!

ಸರಿ, ಇಲ್ಲಿ ಒಂದು ಗೆರೆ ಇದೆ.

ಇಲ್ಲಿ ನೋಡುವ.

ಇದೇನು ಆಗಬಹುದು?





ವರ್ತುಳಾಕಾರದಲ್ಲಿ ಮತ್ತು ಚಚ್ಚೌಕವಾಗಿ
ಅಲ್ಲಿ ಮತ್ತು ಇಲ್ಲಿ ಸುತ್ತುತ್ತ ಸುತ್ತುತ್ತ
ಮತ್ತು ಎಲ್ಲೆಡೆಗೂ...



ಏನು ಅಚ್ಚರಿ!





ಇದು ನನ್ನಂತೆನೇ

ಕಾಣುತ್ತದೆ!






ಕಳೆದ 55 ವರುಷಗಳಿಂದ
ಲಿಓನಾರ್ಡ
ಕೆಸ್ಲರ ಇವರು ಮಕ್ಕಳಿಗಾಗಿ
ಪುಸ್ತಕಗಳನ್ನು ಬರೆದಿದ್ದಾರೆ.


ಅವರು 200 ಕ್ಕೂ ಹೆಚ್ಚು ಪುಸ್ತಕಗಳಿಗಾಗಿ ಚಿತ್ರಗಳನ್ನು ತೆಗೆದಿದ್ದಾರೆ. ಆದರಲ್ಲಿ 40 ಕ್ಕೂ ಹೆಚ್ಚು ಪುಸ್ತಕಗಳಲ್ಲಿ ಅವರ ಪತ್ನಿ, ಎಥೆಲಳ ಪಾಲಿದೆ. ಇವೆಲ್ಲ ಮೊದಲ ಸಲದ ವಾಚಕರಿಗಾಗಿ ರಚಿಸಿದ ಪುಸ್ತಕಗಳು. ನ್ಯೂಯಾರ್ಕ ಟಾಯಿಮ್ಸದ ಮಕ್ಕಳಿಗಾಗಿ ಚಿತ್ರಿಸಿದ ಸರ್ವೋತ್ಕೃಷ್ಟ ಪುಸ್ತಕಗಳೆಂದು ಇವರ ಮೂರು ಪುಸ್ತಕಗಳಿಗೆ ಪಾರಿತೋಷಕ ದೊರೆತಿದೆ.

ಲೇಖಕ ಮತ್ತು ಚಿತ್ರಕಲಾವಿದ ರಾಗುವ ಬಗ್ಗೆ ಯಾರ ಪ್ರೇರಣೆ ಎಂದು ಕೇಳಿದಾಗ "ನನಗೆ ಚಿಕ್ಕಂದಿನಿಂದಲೂ ಚಿತ್ರ ತೆಗೆಯುವ ಹುಚ್ಚು... ನನ್ನ ಅಜ್ಜಿ ಮಾರಿಯಾ, ನನಗೆ, ನಾನು ಆರು ವರುಷದವನಿದ್ದಾಗ ಕ್ರೇಯಾಲ ಪೆನ್ಸಿಲ್ಲುಗಳ ಪೆಟ್ಟಿಗೆ ಕೊಟ್ಟಂದಿನಿಂದ ನಾನು ಬಣ್ಣ ಬಣ್ಣದ ಪಕ್ಷಿಗಳ ಚಿತ್ರ ಬರೆಯುತ್ತಿದ್ದೆ. ... .ನನಗೆ ಬಣ್ಣಗಳು ಸೇರುತ್ತಿದ್ದವು. ... ನನಗೆ ಶಬ್ದಗಳ ಮೇಲೆ ಬಹು ಪ್ರೀತಿ. ... ನಾನು ಕವನ, ಕತೆ ಬರೆಯುತ್ತಿದ್ದೆ. ...ಶಬ್ದ ಮತ್ತು ಚಿತ್ರಗಳನ್ನು ಒಂದೆಡೆ ಮಾಡುವದರಲ್ಲಿ ನನಗೆ ಇಷ್ಟ. ಹೀಗಾಗಿ ಇಂತಹ ಪುಸ್ತಕಗಳು... "ತರುಣ ಕಲಾವಿದರಿಗೆ ಸಂದೇಶ ಕೊಡುವಾಗ "ನೀವು ಅವುಗಳನ್ನು ಪ್ರೀತಿಸುತ್ತಿರುವಿರೆಂದು ಚಿತ್ರ ತೆಗೆಯುತ್ತಿದ್ದಿರಿ. .. ದಿನಾಲು ಬರೆಯಿರಿ ಮತ್ತು ಚಿತ್ರ ತೆಗೆಯಿರಿ. ...ನೀವು ಕಲಾವಿದರು ಎಂಬುದುನ್ನು ನೆನಪಿಡಿ. ಹಿರಿಯರ ಕಲಾಚಿತ್ರಗಳನ್ನು ವೀಕ್ಷಿಸಿ. ಪಿಕ್ಯಾಸೋ. ರೆಂಬ್ರಾ ... ಗೋಯಾ...ಪೋಲಾಕ.. ಅವರೇನು ಮಾಡಿದರು ಎಂಬುದನ್ನು ತಿಳಿದುಕೊಳ್ಳಿ. ಚಿತ್ರ ತೆಗೆಯುವ ಹಲವಾರು ಬಗೆಗಳಿವೆ. ...
ಲೇಖಕರಾಗಬೇಕಿದ್ದರೆ ಡಾಯರಿಯಲ್ಲಿ ಪ್ರತಿ ದಿನ ನೋಂದು ಮಾಡುತ್ತಿರಿ. .. ಪ್ರತಿ ದಿನ ಎರಡೇ ವಾಕ್ಯಗಳನ್ನು ಬರೆದರೂ ವರುಷದಲ್ಲಿ ೭೩೦ ವಾಕ್ಯಗಳಾಗುತ್ತವೆ... !!!"

ಏಕಲವ್ಯವಿದು 1982ರಿಂದ ಶೈಕ್ಷಣಿಕ ಮತ್ತು ಜನವಿಜ್ಞಾನಕ್ಕಾಗಿ ಕಾರ್ಯ ಮಾಡುತ್ತಿರುವ ಅಶಾಸಕೀಯ ಎಂದು ನೋಂದಾದ ಸಂಸ್ಥೆ.
ಮಕ್ಕಳ ಪರಿಸರಕ್ಕಾಗಿ ಸರಿ ಹೊಂದುವ ಹಾಗು ಆಟ ಮತ್ತು ರಚನಾತ್ಮಕ ಚಟುವಟಿಕೆಗಳನ್ನು ಆಧರಿಸಿದ ಶೈಕ್ಷಣಿಕ ರೀತಿ ಹಾಗು ವಸ್ತುಗಳನ್ನು ವಿಕಸಿತ ಗೊಳಿಸುವ ಉದ್ದಿಷ್ಟವನ್ನು ಏಕಲವ್ಯ ಇಟ್ಟುಕೊಂಡಿದೆ. ಈ ಕ್ಷೇತ್ರದಲ್ಲಿಯ ನಮ್ಮ ಅನುಭವದ ಮೇರೆಗೆ ಶಾಲೆಗಳಲ್ಲಿಯ ಪ್ರಯತ್ನಗಳು ಪರಿಣಾಮಕಾರಿ-ಯಾಗಬೇಕಾದರೆ ಮಕ್ಕಳಿಗೆ ಶಾಲೆಯ ಹೊರಗೆ ರಚನಾತ್ಮಕ ಕಾರ್ಯಮಾಡಲು ಸಂಧಿ ಉಪಲಬ್ಧವಾಗಬೇಕು ಎಂಬುದು ಕಂಡುಬಂದಿತು. ಇದಕ್ಕಾಗಿ ಪುಸ್ತಕ, ಮ್ಯಾಗೆಝಿನ್ನು ಮತ್ತು ಇತರ ಕೆಲ ಶೈಕ್ಷಣಿಕ ಸಾಧನೆಗಳು ಆವಶ್ಯಕ.







ಪಾಲಕ ಮತ್ತು ಶಿಕ್ಷಕರಿಗಾಗಿ...

ಪುಸ್ತಕ ಓದುವದು ಒಂದು ಮೋಜಿನ ಅನುಭವ ಎಂಬುದನ್ನು ಈ ಪುಸ್ತಕ ಬಿಂಬಿಸುತ್ತದೆ. ಕತೆ ವರ್ತುಳ ಮತ್ತು ಚಚ್ಚೌಕ ಈ ಸಂಕಲ್ಪನೆಯನ್ನು ವಿವರಿಸುತ್ತದೆ. ಗೆರೆಗಳು ಯಾವ ಪವಾಡ ಮಾಡಬಹುದನ್ನು ತೋರಿಸುತ್ತದೆ. ತನ್ನ ಕಾರ್ಯದಲ್ಲಿ ರುಚಿ ತೋರಿಸುವ ಚಿಕ್ಕ ಕಲಾವಿದನು ಈ ಕತೆ ಹೇಳುತ್ತಿದ್ದಾನೆ. ಇದೇ ರೀತಿ ಗೆರೆಗಳ ಜತೆ ಆಟವಾಡಲು ಇದು ಚಿಕ್ಕ ಮಕ್ಕಳನ್ನು ಪ್ರೇರೇಪಿಸುತ್ತದೆ.

ಇಲ್ಲಿ ಉದ್ದ ಉದ್ದವಾದ ವಾಕ್ಯಗಳಿಲ್ಲ ಎಂಬುದು ಹಿರಿಯರಿಗೆ ತಿಳಿದಿರಬಹುದು. ಶಬ್ದಗಳು ಕೂಡ ಸುಲಭ ಹಾಗು ಅವುಗಳನ್ನು ಜಾಣತನದಿಂದ ೨-೩ ಸಲ ಅನ್ನುತ್ತ ಹೋದರೆ ಮಕ್ಕಳು "ಇದು ಒಂದು ಒಳ್ಳೆಯ ಕತೆ. ನಾನು ಕೂಡ ಓದುವೆ," ಎಂದೆನ್ನಬಹುದು.

ಕೆಲ ಮಕ್ಕಳಿಗೆ ಈ ಕತೆ ಹೇಳುತ್ತಿರುವದನ್ನು ಕೇಳುತ್ತ ತಿಳಿದು ಕೊಳ್ಳುವದರಲ್ಲಿ ರುಚಿ ಇರಬಹುದು. ಉಳಿದವರಿಗೆ ಸ್ವಂತ ಓದುವದರಲ್ಲಿ. ಮೊದಮೊದಲು ಓದುವಾಗ ಸ್ವಲ್ಪ ಹಿರಿಯರ ಸಹಾಯ ಬೇಕಾಗಬಹುದು. ಆ ಮೇಲೆ ಮಾತ್ರ ತಾವೇ ಓದುವರು. ಒಂದನೇ - ಎರಡನೇ ತರಗತಿ ಮಕ್ಕಳು ತಾವೇ ಒಬ್ಬಂಟಿಗರಾಗಿ ಓದಲು ಇಷ್ಟಪಡಬಹುದು.

parag
AN INITIATIVE OF TATA TRUSTS

ಏಕಲವ್ಯ ಪ್ರಕಾಶನ

Price: ₹ 100.00
9789385236563